**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಪಟ್ಟಣ**

**ಉಪಸ್ಥಿತರು: ಶ್ರೀಮತಿ ಉಷಾರಾಣಿ ಬಿ.ಎನ್,**

ಬಿ.ಎ ಎಲ್ಎಲ್.ಬಿ.,ಎಲ್.ಎಲ್.ಎಂ.,

**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**ದಿನಾಂಕ:20 ನೇ ಸೆಪ್ಟೆಂಬರ್ 2023**

**ಅಸಲು ದಾವಾ ಸಂಖ್ಯೆ.62/2019**

**ವಾದಿಗಳು** : ಶ್ರೀಮತಿ ವೆಂಕಟಲಕ್ಷ್ಮಮ್ಮ

-ವಿರುದ್ಧ -

**ಪ್ರತಿವಾದಿಗಳು** : ಶ್ರೀ ಕೆ.ಎಂ.ಪುಟ್ಟೇಗೌಡ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-6**

**ಅರ್ಜಿದಾರರು/ವಾದಿಗಳು :** ಶ್ರೀಮತಿ ವೆಂಕಟಲಕ್ಷ್ಮಮ್ಮ
**(ಪ್ರತಿನಿಧಿಸುವವರು ಶ್ರೀ.ಎಂ.ಆರ್.ಎಸ್. ವಕೀಲರು)**

**-- ವಿರುದ್ಧ --**

**ಎದುರುದಾರರು/**
**ಪ್ರತಿವಾದಿಗಳು** : ಶ್ರೀ ಕೆ.ಎಂ.ಪುಟ್ಟೇಗೌಡ ಮತ್ತು ಇತರರು
**(ಪ್ರತಿನಿಧಿಸುವವರು ಶ್ರೀ.ಪಿ.ಹೆಚ್, ವಕೀಲರು)**

| | | |
|---|---|---|
| ಅರ್ಜಿಯ ಸ್ವರೂಪ | : | 6 ನಿಯಮ 17 ಸಹವಾಚಕ ಕಲಂ 151 |
| ಯಾವ ಪರಿಹಾರ ಕೋರಲಾಗಿದೆ | : | ವಾದ ಪತ್ರ ಹಾಗೂ ಷೆಡ್ಯೂಲ್ ತಿದ್ದುಪಡಿ |
| ಅರ್ಜಿ ಸಲ್ಲಿಸಿದ ದಿನಾಂಕ | : | 22.11.2022 |
| ಅರ್ಜಿಯ ಸಂಖ್ಯೆ | | VI |
| ತಕರಾರು ಸಲ್ಲಿಸಿದ ದಿನಾಂಕ | : | 13.12.2022 |
| ಆದೇಶದ ದಿನಾಂಕ | : | 20.09.2023 |

****

**ಮಧ್ಯಂತರ ಅರ್ಜಿ ಸಂಖ್ಯೆ: 6 ರ ಮೇಲಿನ ಆದೇಶ:**

ಮಾನ್ಯ ಪ್ರತಿವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 6 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ, ಲಿಖಿತ ತಕರಾರಿನಲ್ಲಿ ಉದ್ದೇಶಿತ ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

**ಉದ್ದೇಶಿತ ತಿದ್ದುಪಡಿ**

**1.ಖಂಡಿಕೆ 11 ರ ಅಂತ್ಯದಲ್ಲಿ ಸೇರ್ಪಡೆ ಕೋರಿ**

**"11 ಎ).ವಾದಿಯು ದುರುದ್ದೇಶ ಪೂರಿತವಾಗಿ ಈ ದಾವೆಯನ್ನು ತನ್ನ ಸ್ವತ್ತಿನ ಹೊರತುಪಡಿಸಿ ದಾವಾ ಷೆಡ್ಯೂಲ್ ವಿಸ್ತೀರ್ಣಕ್ಕೆ ಹೆಚ್ಚುವರಿಯಾಗಿ ದಾವೆ ಹೂಡಿರುತ್ತಾರೆ. ತಮ್ಮ ವಾದಪತ್ರದಲ್ಲಿ ಎಲ್ಲಿಯೂ ಸಹ ಅವರು ಆರೋಪಿಸುವ ರಸ್ತೆಯ ಬಗ್ಗೆ ಮತ್ತು ಅದರ ಅಗತ್ಯತೆಯ ಬಗ್ಗೆ ಚಕಾರ ಎತ್ತಿರುವುದಿಲ್ಲ ಹಾಗೂ ಬದಲಿ ಸೌಲಭ್ಯವು ಲಭ್ಯವೇ ಅಥವಾ ಇಲ್ಲವೇ ಎಂಬ ಅಂಶವನ್ನು ವಿಷದ ಪಡಿಸಿರುವುದಿಲ್ಲ. ಬದಲಾಗಿ ವಾದಿಯು ಈಗಾಗಲೇ ಹಾಗೂ ಹಿಂದಿನಿಂದಲೂ ತನ್ನ ಸ್ವತ್ತಿನ ಪೂರ್ವದ ಕಡೆ ಅಂದರೆ ಕೆ. ಮಲ್ಲಯ್ಯನ ಮನೆ ಹಾಗೂ ಹಿತ್ತಲು ಎಂದು ನಮೂದಿಸಿರುವ ಕಡೆಯಲ್ಲಿ ಸಂಪೂರ್ಣವಾಗಿ ತಿರುಗಾಡಲು ಅಗತ್ಯವಿರುವ ದಾರಿ/ರಸ್ತೆಯನ್ನು ಹೊಂದಿರುತ್ತಾರೆ. ಆದ ಕಾರಣ ಪ್ರಶ್ನಿತ ಷಡ್ಯೂಲ್ ರಸ್ತೆಯ ಬಗ್ಗೆ ವಾದಿಯ ಯಾವುದೇ ರೀತಿಯ ಪರಿಹಾರವನ್ನು ಕೋರಲು ಅರ್ಹಳಾಗಿರುವುದಿಲ್ಲ. ದಾವೆಯು ಕೇವಲ ಶಾಶ್ವತ ನಿರ್ಬಂದಕಾಜ್ಞೆ ಕೋರಿರುವ ಸೀಮಿತ ದಾವೆಯಾಗಿದ್ದು, ಪ್ರಶ್ನಿತ ಷೆಡ್ಯೂಲ್ ಸ್ವತ್ತಿನ ರಸ್ತೆಯ ಬಗ್ಗೆ ಯಾವುದೇ ಮಾಲೀಕತ್ವದ ಕೋರಿಕೆಯನ್ನು ಕೋರಿರುವುದಿಲ್ಲ. ಇದರಿಂದಾಗಿ ವಾದಿಗೆ ಪ್ರಶ್ನಿತ ಷೆಡ್ಯೂಲ್ ರಸ್ತೆಯ ಅತ್ಯಗತ್ಯವಾದ ಸೌಲಭ್ಯವಾಗಿರುವುದಿಲ್ಲ. ಆದ ಕಾರಣ ವಾದಿಯು ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಅಧಿಬೋಗಿಕೆ ಹಕ್ಕನ್ನು ಕೋರಲು ಅರ್ಹಳಾಗಿರುವುದಿಲ್ಲ. ಅಲ್ಲದೇ ವಾದಿಗೆ ಸಂಬಂಧಿಸಿದಂತೆ 79-80 ನೇ ಸಾಲಿನ ನಸೀಂಹುನ್ನೀಸ ರವರ ಕ್ರಯಪತ್ರದಲ್ಲಿನ ಅಂಶಗಳು ಮೇಲೆ ಹೇಳಿರುವ ವಾದಿಗೆ ಲಭ್ಯವಿರುವ ಬದಲಿ ರಸ್ತೆಯ ಬಗ್ಗೆ ಸ್ಪಷ್ಟವಾಗಿ**

ನಿರೂಪಿಸಿರುತ್ತದೆ. ಈ ಅಂಶಗಳು ವಾದಿಯ ದಾವೆಯು ಸಂಪೂರ್ಣವಾಗಿ ನಿರರ್ಥಕ ಎಂಬುದನ್ನು ಸಾಬೀತು ಪಡಿಸುತ್ತದೆ. ಅಲ್ಲದೇ ವಾದಿಯ ದಾವ ಪತ್ರದಲ್ಲೇಲ್ಲಿಯೂ ಅಧಿಭೋಗಿಕೆ ಬಗ್ಗೆ ಕೋರಿಕೆ ಸಲ್ಲಿಸದಿರುವ ಕಾರಣ ಈ ದಾವೆಯ ವಜಾವಾಗಲು ಸೂಕ್ತವಾಗಿರುತ್ತದೆ. ಈ ಬಾಬ್ತು ಸಂಬಂಧಿತ ಗ್ರಾಮಪಂಚಾಯತಿ ಅಧಿಕಾರಿಗಳು ಸ್ಥಳ ಸನಿಖೆ ಮಾಡಿ ವಾಸ್ತವತೆಯನ್ನು ವಾದಿಗೆ ಮನವರಿಕೆ ಮಾಡಿದ್ದಾಗಿಯೂ, ವಾದಿಯು ದುರುದ್ದೇಶದಿಂದ ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆಯನ್ನು ವೃಥಾ ತಂದಿರುತ್ತಾರೆ."

"11 ಬಿ) ವಾದಿಯು ವಿವಾದಿತ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣವನ್ನು ಉದ್ದೇಶ ಪೂರ್ವಕವಾಗಿ ನಮೂದಿಸದೇ ಕೇವಲ ಚೆಕ್ ಬಂದಿಯನ್ನು ನಮೂದಿಸಿ ಸಾಧ್ಯವಾದಲ್ಲಿ ಸಲ್ಲಿಸಬೇಕಾದ ನ್ಯಾಯಾಂಗ ಶುಲ್ಕವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ತನ್ನ ಸಂಪೂರ್ಣ ಆಸ್ತಿಗೆ ಚೆಕ್ಕುಬಂದಿಯನ್ನು ಒದಗಿಸಿರುತ್ತಾನೆ. ಆದ ಕಾರಣ ಸ್ಪಷ್ಟ ವಿಸ್ತೀರ್ಣ ಹಾಗೂ ಸೂಕ್ತ ನ್ಯಾಯಾಲಯದ ಶುಲ್ಕ ಮತ್ತು ವಸ್ತು ವಿಚಾರದ ಮೌಲ್ಯಮಾಪಕವನ್ನು ಸ್ಪಷ್ಟವಾಗಿ ನಮೂದಿಸಿದ ಕಾರಣ ಈ ದಾವೆಯನ್ನು ವಜಾಮಾಡತಕ್ಕದ್ದಾಗಿರುತ್ತದೆ. ವಾದಿಯು ನಿರೂಪಿಸಿರುವ ದಾವ ಚೆಕ್ಕುಬಂದಿಯು ಸುಮಾರು 59*108 ಅಡಿಗಳ ವಾಸದ ಮನೆಯ ಗ್ರಾಮ ಠಾಣಾ ವ್ಯಾಪ್ತಿಯ ಸ್ವತ್ತಿಗೆ ಸಂಬಂಧಿಸಿದ್ದು, ಆದರೆ ಅದರ ಬಾಬ್ತು ಯಾವುದೇ ರೀತಿಯ ಮೌಲ್ಯಮಾಪನವನ್ನು ನಿರುಪಿಸಿರುವುದಿಲ್ಲ. ಆದ ಕಾರಣ ದಾವೆಯ ಮೇಲೆ ಪಾವತಿ ಮಾಡಿರುವ ನ್ಯಾಯಾಂಗ ಶುಲ್ಕವು ತೀರ ಕನಿಷ್ಟತಮವಾಗಿದ್ದು, ಸರಿಯಾದ ನ್ಯಾಯಾಂಗ ಶುಲ್ಕವಾಗಿರುವುದಿಲ್ಲ. ಈ ಒಂದು ಅಂಶದ ಮೇಲೆಯೂ ಸಹ ದಾವೆಯನ್ನು ವಜಾಮಾಡತಕ್ಕದಾಗಿರುತ್ತದೆ."

2. 1 ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ದಾವಾ ಸ್ವತ್ತಿನ ಬಾಬ್ತು ಹೂಡಿರುವ ದಾವೆಯು ಯಾವುದೇ ಕಾರಣಕ್ಕೂ ಊರ್ಜಿತವಾಗತಕ್ಕದ್ದಲ್ಲ. ಇದರ ಬಾಬ್ತು ಅವರು ಈಗಾಗಲೇ ಅವರ ಸಾಮಾನ್ಯ ಲಿಖಿತ ತಕರಾರನ್ನು ಸಲ್ಲಿಸಿದ್ದು, ಸದರಿ ಅಂಶಗಳನ್ನು ಅವರ ಈ ಪ್ರಮಾಣ ಪತ್ರಿಕೆಯ ಅಂಶವಾಗಿ ಸಹವಾಚಿಸಬೇಕೆಂದು ಕೋರುತ್ತಾರೆ. ವಾದಿಯು

ಮುಗುಂ ಆಗಿ ದಾವೆಯನ್ನು ಯಾವ ಉದ್ದೇಶಕ್ಕೆ ಹೂಡಲಾಗಿದೆ ಎಂಬ ಅಂಶವನ್ನು ವಿವರಿಸದೇ ಕೇವಲ ನಿರ್ಭಂದಕಾಜ್ಞೆ ದಾವೆ ಎಂದು ರೂಪಿಸಿ ತಮ್ಮ ಒಟ್ಟಾರೆ ಸ್ವತ್ತಿಗೆ ಹೂಡಿರುವ ದಾವಯು ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ. ದಾವಾ ಪತ್ರಕ್ಕೆ ಅವರು ತಕರಾರನ್ನು ಸಲ್ಲಿಸುವ ವೇಳೆಯಲ್ಲಿ ಲಭ್ಯವಿದ್ದಂತಹ ದಾಖಲಾತಿಗಳ ಆಧಾರದ ಮೇಲೆ ತಕರಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಇತ್ತೀಚೆಗೆ ಅವರ ವಕೀಲರ ಬಳಿ ಚರ್ಚಿಸಿರುವಾಗ ಕಂಡು ಬಂದ ಅಂಶದಂತೆ ವಾದಿಯ ದಾವಾ ಸ್ವತ್ತಿನ ಪೂರ್ವ ಪರಗಳನ್ನು ಪರಿಶೀಲಿಸಲಾಗಿ, ದಾವಾ ಸ್ವತ್ತಿನ ಹಿಂದಿನ ಮಾಲೀಕರಾದ ನಸೀಂಹುನ್ನಿಸಾ ರವರು ದಿನಾಂಕಃ27.11.1979 ರಲ್ಲಿ ಅವರ ಮಗಳು ಆದ ರಶೀದಾಖಾನಂ ಕೋಂ ಅಂಜದ್ ಪಾಷಾ ರವರಿಗೆ ಬರೆದುಕೊಟ್ಟಿರುವ ಶುದ್ಧ ಕ್ರಯಪತ್ರವು ಗಮನಕ್ಕೆ ಬಂದಿರುತ್ತದೆ. ವಕೀಲರ ಮುಖೇನ ಅದನ್ನು ಪರಿಶೀಲಿಸಿದಾಗ ವಾದಿಯ ಸ್ವತ್ತಿನ ಪೂರ್ವಕ್ಕೆ ತಿರುಗಾಡುವ ಸಂಪೂ/ಗಲ್ಲಿ /ದಾರಿ ಲಭ್ಯವಿರುವ ಅಂಶ ಕಂಡುಬಂದಿರುತ್ತದೆ. ಆದರೆ ಈ ಅಂಶವನ್ನು ವಾದಿ ಮತ್ತು ಅವಳ ಹಿಂದಿನವರು ಉದ್ದೇಶ ಪೂರ್ವಕವಾಗಿ ದಾವಾ ಪತ್ರದಲ್ಲೇಲ್ಲಿಯೂ ಸಹ ಪ್ರಸ್ತಾಪಿಸಿರುವುದಿಲ್ಲ. ಈ ಒಂದು ಅಂಶವು ವಾದಿಯು ನ್ಯಾಯಾಲಯನ್ನು ಸ್ವಚ್ಚ ಹಸ್ತದಿಂದ ಸಂಪರ್ಕಿಸಿರುವುದಿಲ್ಲ ಎಂಬ ಅಂಶವನ್ನು ಎತ್ತಿ ತೋರುತ್ತದೆ. ವಾದಿಗೆ ಈ ಒಂದು ಬದಲಿ ವ್ಯವಸ್ಥೆಯು ಹಿಂದಿನಿಂದಲೂ ಲಭ್ಯವಿದ್ದಾಗಿಯೂ, ಪ್ರತಿವಾದಿಗಳಿಗೆ ವೃಥಾ ತೊಂದರೆ ಕೊಡುವ ಉದ್ದೇಶವುಳ್ಳವಳಾಗಿ ಈ ದಾವೆಯನ್ನು ತಂದಿರುತ್ತಾರೆ. ದಾವಾ ಸ್ವತ್ತಿಗೆ ಬದಲಿ ಸಂಪರ್ಕವಿರುವ ವಿಚಾರವು ಪ್ರತಿವಾದಿಗಳಾದ ಅವರಿಗೆ ತಿಳಿದಿರುವುದಿಲ್ಲ. ಆದರೆ ಇತ್ತೀಚೆಗೆ ಈ ಅಂಶವು ಅವರ ಗಮನಕ್ಕೆ ಬರಲಾಗಿ ಅದನ್ನು ಪರಿಶೀಲಿಸಿದಾಗ ವಾದಿಗಳ ಈ ದುರುದ್ದೇಶವು ಕಂಡುಬಂದಿರುತ್ತದೆ. ಈ ಕಾರಣದಿಂದಾಗಿ ಲಿಖಿತ ತಕರಾರನ್ನು ಸಲ್ಲಿಸುವ ವೇಳೆ ಮಾಹಿತಿ ಕೊರತೆಯಿಂದ ಈ ಉದ್ದೇಶಿತ ತಿದ್ದುಪಡಿಯ ಅಂಶಗಳನ್ನು ಲಿಖಿತ ಪತ್ರದಲ್ಲಿ ನಮೂದಿಸಲು ಸಾಧ್ಯವಾಗಿರಲಿಲ್ಲ. ಉದ್ದೇಶಿತ ತಿದ್ದುಪಡಿಯು ಈ ದಾವೆಯ ಅಂತಿಮ ಹಾಗೂ ಸಂಪೂರ್ಣ ನಿರ್ಣಯಕ್ಕಾಗಿ ಅತ್ಯಂತ ಅಗತ್ಯವಾದ ಅಂಶವಾಗಿರುತ್ತದೆ. ಉದ್ದೇಶಿತ ತಿದ್ದುಪಡಿಯನ್ನು ತಕರಾರಿನಲ್ಲಿ ಅಳವಡಿಸಿಕೊಂಡಲ್ಲಿ ವಾದಿಗಳಿಗೆ ಯಾವುದೇ ಬಾಧಕವಾಗುವುದಿಲ್ಲ. ಒಂದು ವೇಳೆ ಉದ್ದೇಶಿತ ತಿದ್ದುಪಡಿಯನ್ನು ಅಳವಡಿಸಿಕೊಳ್ಳದಿದ್ದಲ್ಲಿ ವಾದಿಗಳು ಅದರ ದುರ್ಲಾಭ ಪಡೆದು ನಮಗೆ ಸೇರಿದ ಸ್ವತ್ತಿನ ಮೇಲೆ ಆಕ್ರಮಣ ಮಾಡುತ್ತಾರೆ. ಆದಕಾರಣ ಉದ್ದೇಶಿತ ತಿದ್ದುಪಡಿಯ ಅತ್ಯಂತ ಅಗತ್ಯವಾದ ಸ್ವಾಭಾವಿಕವಾದ

ಹಾಗೂ ನ್ಯಾಯಾಯುತವಾದ ರಕ್ಷಣೆಯಾಗಿರುತ್ತದೆ. ಆದುದರಿಂದ ಈ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಲಾಗಿದೆ. ಸದರಿ ಅರ್ಜಿಯನ್ನು ಪುರಸ್ಕರಿಸುವುದರಿಂದ ವಾದಿಗಳಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ, ಪುರಸ್ಕರಿಸದೇ ಹೋದಲ್ಲಿ ಪ್ರತಿವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿ ಸಂಖ್ಯೆ:6 ನ್ನು ಪುರಸ್ಕರಿಸಿ ಲಿಖಿತ ತಕರಾರನ್ನು ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

3. ಮಾನ್ಯ ವಾದಿಗಳ ಪರ ವಕೀಲರು ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ, ವಾದಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಪ್ರತಿವಾದಿಗಳು ಸಲ್ಲಿಸಿರುವ ಅರ್ಜಿಯು ಊರ್ಜಿತವಾಗತಕ್ಕದಲ್ಲ ವಜಾಗೊಳಿಸಲು ಯೋಗ್ಯವಾಗಿರುತ್ತದೆ. ಉದ್ದೇಶಿತ ತದ್ದುಪಡಿ ಒಂದರಲ್ಲಿ ತಿಳಿಸಿರುವಂತೆ ಯಾವುದೇ ಹೆಚ್ಚುವರಿ ಅಳತೆ ದಾವೆಯಲ್ಲಿ ಸಲ್ಲಿಸಿರುವುದಿಲ್ಲ ವಾದಿ ಹಿರಿಯ ಪುಟ್ಟೇಸಿದ್ದೇಗೌಡರು ಕ್ರಯ ಪಡೆದು ಕ್ರಯ ಪತ್ರದಂತೆ ಅಳತೆ ನಮೂದು ಮಾಡಿದ್ದು ಅದ್ದರಂತೆ ಚೆಕ್ಕುಬಂದಿ ನಮೂದಿಸಿ ದಾವೆ ಸಲ್ಲಿಸಿರುತ್ತಾರೆ. ಪುರ್ವದ ಕಡೆ ಅಂದರೆ ಕೆ.ಮಲ್ಲಯ್ಯನ ಮನೆ ಹಾಗೂ ಹಿತ್ತಲು ಇರುವುದು ಸತ್ಯ ಅಲ್ಲಿ ತಿರುಗಾಡಲು ವಾದಿಗೆ ರಸ್ತೆ ಇದೇ ಎಂಬುದನ್ನು ಪ್ರತಿವಾದಿಗಳು ಅದಕ್ಕೆ ಸಂಬಂಧಪಟ್ಟ ಪೂರಕ ದಾಖಲೆಯನ್ನು ಅರ್ಜಿಯ ಜೊತೆ ಲಗತ್ತಿಸಿರುವುದಿಲ್ಲ ಒಂದು ವೇಳೆ ರಸ್ತೆ ಇದ್ದಲ್ಲಿ ದಾಖಲೆ ಸಮೇತ ರುಜುವಾತು ಪಡಿಸಬೇಕಾಗಿರುತ್ತದೆ. 79-80 ನೇ ಸಾಲಿನ ನಸಿಂಹುನ್ನಿಸರವರು ಕ್ರಯ ಪತ್ರದ ಬಗ್ಗೆ ತಿಳಿಸಿದ್ದು ವಾದಿಗೆ ಮಾರಟಗಾರರಿಗೆ ದಾವ ಸ್ವತ್ತು ಪಿತ್ರಾರ್ಜಿತವಾದ ಸ್ವತ್ತಾಗಿರುತ್ತದೆ. ಕ್ರಯ ಇದೇ ಎಂದು ಹೇಳಿರುವ ಅಂಶವು ಪ್ರತಿವಾದಿಗಳೇ ಸಾಬೀತುಪಡಿಸಬೇಕಾಗಿರುತ್ತದೆ. ಸ್ಥಳಕ್ಕೆ ಗ್ರಾಮಪಂಚಾಯಿತಿ ಅಧಿಕಾರಿಗಳು ಬಂದಿದ್ದರು ರಸ್ತೆ ಇರುವ ಬಗ್ಗೆ ವಾದಿಗೆ ಮನವರಿಕೆ ಮಾಡಿದ್ದರು ಎಂಬ ವಿಚಾರ ದಾಖಲೆ, ಸಮೇತ ನ್ಯಾಯಾಲಯದಲ್ಲಿ ಸಾಬೀತು ಪಡಿಸಬೇಕಾಗಿರುತ್ತದೆ. ಉದ್ದೇಶಿತ 11 ಬಿ ಅಂಶಗಳು ದಾವೆಯ ಸ್ವರೂಪ ಏನು ಎಂದು ತಿಳಿಯದೆ. ಈ ಅಂಶವನ್ನು ಸೇರಿಸಲು ಹೊರಟಿದ್ದು ವಾದಿ ಶಾಶ್ವತ ನಿರ್ಭಂಧಕಾಜ್ಞೆ ದಾವೆಗೆ ಎಷ್ಟು ನ್ಯಾಯಾಲಯ ಶುಲ್ಕ ಪಾವತಿ ಮಾಡಬೇಕು ಅಷ್ಟನ್ನು ನ್ಯಾಯಾಲಯಕ್ಕೆ ಪಾವತಿ ಮಾಡಿರುತ್ತಾರೆ. ಆದ್ದರಿಂದ ವಾದಿಯು ಸಲ್ಲಿಸಿರುವ ಈ ಮಧ್ಯಕಾಲೀನ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**<u>ಃಅಂಶಗಳುಃ</u>**

**1. ಮಧ್ಯಂತರ ಅರ್ಜಿ ಸಂಖ್ಯೆಃ ಪುರಸ್ಕಾರಗೊಳ್ಳಲು ಯೋಗ್ಯವಾಗಿದೆಯೇ?**
**2. ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**<u>ಕಾರಣಗಳು</u>**

7. **<u>ಅಂಶ ಸಂಖ್ಯೆಃ1ಃ</u>** ವಾದಿಗಳು ಪ್ರತಿವಾದಿಗಳ ವಿರುದ್ದ ಈ ದಾವೆಯನ್ನು ಸದರಿ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ಮತ್ತು ಇತರ ಪರಿಹಾರ ಕೋರಿ ಸದರಿ ದಾವೆಯನ್ನು ಸಲ್ಲಿಸಲಾಗಿದೆ. ಪ್ರತಿವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 6 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ, ಲಿಖಿತ ತಕರಾರಿನಲ್ಲಿ ಉದ್ದೇಶಿತ ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

8. ವಾದಿಯರು ತಮ್ಮ ತಕರಾರಿನಲ್ಲಿ ಪ್ರತಿವಾದಿಯರು ಉದ್ದೇಶಪೂರ್ವಕವಾಗಿ ಹಾಗೂ ದುರುದ್ದೇಶದಿಂದ ಸದರಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ, ಪ್ರತಿವಾದಿಯರು ಸಲ್ಲಿಸಿದ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

9. ಈ ದಾವೆಯಲ್ಲಿ ಪಕ್ಷಗಾರರ ವಿಚಾರಣೆಯು ಪ್ರಾರಂಭವಾಗಿದ್ದರೂ ಪ್ರಸ್ತಾಪಿತ ತಿದ್ದುಪಡಿಯು ಯಾವುದೇ ಹೊಸ ಸಂಗತಿಗಳನ್ನು ಹೊರತರುವುದಿಲ್ಲ. ಅದೇ ರೀತಿ ದಾವೆಯ ಸ್ವರೂಪವಾಗಲೀ, ಅಥವಾ ವ್ಯಾಜ್ಯ ಕಾರಣವಾಗಲೀ, ಬದಲಾವಣೆಯಾಗುವುದಿಲ್ಲ. ಪ್ರಸ್ತಾಪಿತ ತಿದ್ದುಪಡಿಯಿಂದ ವಾದಿಗಳ ಪ್ರತಿರಕ್ಷೆಗೆ ಯಾವುದೇ ದಕ್ಕೆಯಾಗುವುದಿಲ್ಲ. ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ಪ್ರತಿವಾದಿಯರಿಗೆ ಅವರ ಹಕ್ಕಿಗೆ ನಷ್ಟವುಂಟಾಗುವ ಸಾಧ್ಯತೆಯಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿ ಸಂಖ್ಯೆ:2 ನ್ನು ಪುರಸ್ಕಾರಗೊಳ್ಳಲು ಯೋಗ್ಯವಾಗಿರುತ್ತದೆ. ಅರ್ಜಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ವೆಚ್ಚವನ್ನು ಹಾಕು ಮೂಲಕ ಸರಿದೂಗಿಸಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು **ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

10. <u>**ಅಂಶ ಸಂಖ್ಯೆ:2:-**</u> ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: VI ನ್ನು ರೂ.300/- ಖರ್ಚು ಸಹಿತ ಪುರಸ್ಕರಿಸಲಾಗಿದೆ.**

**ಮಧ್ಯಂತರ ಅರ್ಜಿಸಂಖ್ಯೆ: VI ರಲ್ಲಿ ಕೋರಿರುವಂತೆ ಲಿಖಿತ ತಕರಾರನ್ನು ತಿದ್ದುಪಡಿ ಮಾಡಲು ಪ್ರತಿವಾದಿಗಳಿಗೆ ಅನುಮತಿ ನೀಡಲಾಗಿದೆ.**

(ಬೆರಳಚ್ಚು ನಕಲುಗಾರರಿಗೆ ತೀರ್ಪನ್ನು ನೇರವಾಗಿ ಉಕ್ತಲೇಖನ ನೀಡಿದ್ದು, ಅವರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ನಂತರ ಅದನ್ನು ಪರಿಶೀಲಿಸಿ, ಸಹಿಯನ್ನು ಮಾಡಿ ಈ ದಿನ 20 ನೇ **ಸೆಪ್ಟೆಂಬರ್ - 2023** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

USHARANI B N Digitally signed by USHARANI B N Date: 2023.09.22 10:44:00 +0530

**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**

**ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ**
**(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)**

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: VI ನ್ನು ರೂ.300/- ಖರ್ಚು ಸಹಿತ ಪುರಸ್ಕರಿಸಲಾಗಿದೆ.**

**ಮಧ್ಯಂತರ ಅರ್ಜಿಸಂಖ್ಯೆ: VI ರಲ್ಲಿ ಕೋರಿರುವಂತೆ ಲಿಖಿತ ತಕರಾರನ್ನು ತಿದ್ದುಪಡಿ ಮಾಡಲು ಪ್ರತಿವಾದಿಗಳಿಗೆ ಅನುಮತಿ ನೀಡಲಾಗಿದೆ.**

**For amendment and amended petition by 13.10.2023.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**